ಸಾಂಸ್ಕೃತಿಕ ಅಕಾಡಮಿಗಳಿಗೆ ಅಧ್ಯಕ್ಷರ ನೇಮಕ

425(333) ಡಾ॥ ಮಾಲಕರೆಡ್ಡಿ ಎ. ಬಿ. (ಯಾದಗಿರಿ)

ಅ) ರಾಜ್ಯದ ವಿವಿಧ ಇಲಾಖೆಗಳ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಾಂಸ್ಕೃತಿಕ ಅಕಾಡಮಿಗಳು ಎಷ್ಟು? ಅವು ಯಾವುವು;

ಆ) ಈ ಅಕಾಡಮಿಗಳಿಗೆ ಸರ್ಕಾರ ಬದಲಾವಣೆಯಾದಾಗ ಅಧ್ಯಕ್ಷರು ಮತ್ತು ಸದಸ್ಯರನ್ನು ಬದಲಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಸ್ಥಾನಗಳನ್ನು ಭರ್ತಿ ಮಾಡಲು ಸರ್ಕಾರದ ವಿಳಂಬ ನೀತಿಯಿಂದ ಈ ಅಕಾಡಮಿಗಳು ನಡೆಸುವ ಚಟುವಟಿಕೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಅಕಾಡೆಮಿಗಳಿಗೆ ಅರ್ಹ ಅಧ್ಯಕ್ಷರು ಮತ್ತು ಸದಸ್ಯರ ನೇಮಕಕ್ಕೆ ಸರ್ಕಾರ ಈವರೆಗೂ ಕೈಗೊಂಡ ಕ್ರಮಗಳೇನು? 9/10 ತಿಂಗಳುಗಳಿಂದಲೂ ಈ ಸ್ಥಾನಗಳು ಖಾಲಿ ಇದ್ದರೂ ಸರ್ಕಾರ ಮನವಹಿಸಿರುವುದಕ್ಕೆ ಕಾರಣವೇನು?

ಉ) ಈ ಅಕಾಡೆಮಿಗಳಿಗೆ ಅರ್ಹ ಅಧ್ಯಕ್ಷರು –ಸದಸ್ಯರು ನೇಮಕಕ್ಕೆ ಅನುಸರಿಸುತ್ತಿರುವ ವಿಧಾನದಿಂದ ಅರ್ಹರನ್ನು ಆಯ್ಕೆ ಮಾಡಲಾಗುತ್ತಿದೆ ಎಂದು ಸರ್ಕಾರ ಭಾವಿಸಿರುವುದೇ?

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ)

1. ಕರ್ನಾಟಕ ಲಲಿತಕಲಾ ಅಕಾಡೆಮಿ
2. ಕರ್ನಾಟಕ ಸಂಗೀತ–ನೃತ್ಯ ಅಕಾಡೆಮಿ
3. ಕರ್ನಾಟಕ ಸಾಹಿತ್ಯ ಅಕಾಡೆಮಿ

4. ಕರ್ನಾಟಕ ಶಿಲ್ಪಕಲಾ ಅಕಾಡೆಮಿ
5. ಕರ್ನಾಟಕ ಜಾನಪದ ಅಕಾಡೆಮಿ
6. ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ
7. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
8. ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ
9. ಕರ್ನಾಟಕ ಯಕ್ಷಗಾನ ಮತ್ತು ಬಯಲಾಟ ಅಕಾಡೆಮಿ
10. ಕರ್ನಾಟಕ ನಾಟಕ ಅಕಾಡೆಮಿ
11. ಕರ್ನಾಟಕ ಅರೆಭಾಷಾ ಸಾಹಿತ್ಯ ಅಕಾಡೆಮಿ
12. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ

ಆ) ಬಂದಿದೆ.

ಇ) ಈಗಾಗಲೇ ಅಕಾಡೆಮಿಗಳ ಅಧ್ಯಕ್ಷರ ಸ್ಥಾನದಲ್ಲಿ ಇಲಾಖೆಯ ಆಯುಕ್ತರನ್ನು ಪ್ರಭಾರದಲ್ಲಿ ಇಡಲಾಗಿದ್ದು, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಸುಸೂತ್ರವಾಗಿ ನಡೆಯಲು ಎಲ್ಲಾ ಕ್ರಮಗಳು ಕೈಗೊಳ್ಳಲಾಗಿದೆ.

ಈ) ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ಆಯಾ ಕ್ಷೇತ್ರದಲ್ಲಿ ಪರಿಣಿತಿ ಮತ್ತು ದೀರ್ಘ ಅನುಭವ ಇರುವ ಅರ್ಹರನ್ನು ಅಧ್ಯಕ್ಷರು ಮತ್ತು ಸದಸ್ಯರನ್ನಾಗಿ ನೇಮಕ ಮಾಡಲಾಗುತ್ತಿದೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

427(329)ಡಾ॥ ಶಿವರಾಜ್ ಪಾಟೀಲ್ ಎಸ್ (ರಾಯಚೂರು ನಗರ)

ಅ) ರಾಯಚೂರು ನಗರದಲ್ಲಿ ಸುರಾನ ಹೆಸರಿನ ಕಾರ್ಖಾನೆಯು ಕಾರ್ಯ ನಿರ್ವಹಿಸುತ್ತಿದೆಯೇ;

ಆ) ಹಾಗಿದ್ದಲ್ಲಿ ಈ ಕಾರ್ಖಾನೆಯು ಉತ್ಪಾದಿಸಿರುವ ಉತ್ಪನ್ನಗಳೇನು?

ಇ) ಈ ಕಾರ್ಖಾನೆಗೆ ಸರ್ಕಾರ ನೀಡಿರುವ ಜಮೀನಿನ ವಿಸ್ತೀರ್ಣವೆಷ್ಟು?